# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : **45**
**ಸದಸ್ಯರ ಹೆಸರು** : ಶ್ರೀಮತಿ ಎಸ್.ವೀಣಾ ಅಚ್ಚಯ್ಯ (ವಿಧಾನ ಸಭೆಯಿಂದ ಚುನಾಯಿತರಾದವರು)
**ಉತ್ತರಿಸಬೇಕಾದ ದಿನಾಂಕ** : 13.12.2021
**ಉತ್ತರಿಸುವ ಸಚಿವರು** : ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

*****

<table>
<tr><th colspan="2">ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕೊಡಗು ಜಿಲ್ಲೆಯ ವಿವಿಧ ಭಾಗಗಳಲ್ಲಿ ಗದ್ದೆ ಮತ್ತು ತೋಟದ ಮೂಲಕ ಹಾದು ಹೋಗುತ್ತಿರುವ 66 ಕೆ.ವಿ ವಿದ್ಯುತ್ ಮಾರ್ಗದಿಂದ ಲಭ್ಯವಾಗುವ ವಿದ್ಯುತ್ ಎಷ್ಟು :</td><td>ಪ್ರಸ್ತುತ ಕೊಡಗು ಜಿಲ್ಲೆಯಲ್ಲಿ 66 ಕೆ.ವಿ ವಿದ್ಯುತ್ ಮಾರ್ಗಗಳ ಹೊರೆಯ ವಿವರ ಕೆಳಕಂಡಂತ್ತಿವೆ.
<table>
<tr><th>ಕ್ರಮ ಸಂಖ್ಯೆ</th><th>66 ಕೆ.ವಿ. ಮಾರ್ಗ</th><th>ಗರಿಷ್ಠ ಹೊರೆ (ಆಂಪ್ಸ್ ನಲ್ಲಿ/ಮೆ.ವಾ.)</th></tr>
<tr><td>1.</td><td>ಕುಶಾಲನಗರ-ಶುಂಟಿ ಕೊಪ್ಪ (ಮಡಿಕೇರಿ-2)</td><td>73/8.30</td></tr>
<tr><td>2.</td><td>ಶುಂಟಿಕೊಪ್ಪ-ಮಡಿಕೇರಿ</td><td>28/3.30</td></tr>
<tr><td>3.</td><td>ಕುಶಾಲನಗರ ಮಡಿಕೇರಿ (ಮಡಿಕೇರಿ-1)</td><td>58/9.11</td></tr>
<tr><td>4.</td><td>ಕುಶಾಲನಗರ-ಕರಡಿಲಕ್ಕನ ಕೆರೆ</td><td>268/24.94</td></tr>
<tr><td>5.</td><td>ಪೊನ್ನಂಪೇಟೆ-ವಿರಾಜಪೇಟೆ</td><td>140/14</td></tr>
<tr><td>6.</td><td>ಕುಶಾಲನಗರ-ಪಿರಿಯಾಪಟ್ಟಣ-2</td><td>292/31.16</td></tr>
<tr><td>7.</td><td>ಕುಶಾಲನಗರ-ಪಿರಿಯಾಪಟ್ಟಣ-1</td><td>243/26.70</td></tr>
<tr><td>8.</td><td>ಚಿಕ್ಕ ಬೊಮ್ಮನಹಳ್ಳಿ-ಆಲೂರು ಸಿದ್ಧಾಪುರ</td><td>56/5.83</td></tr>
</table></td></tr>
<tr><td>ಆ)</td><td>ಸದರಿ ವಿದ್ಯುತ್ ಮಾರ್ಗ ಹಾದು ಹೋಗುವ ಜಮೀನಿನ ಮಾಲೀಕರಿಗೆ ನೀಡುವ ಪರಿಹಾರದ ವಿವರಗಳೇನು ; (ಸಂಪೂರ್ಣ ವಿವರ ನೀಡುವುದು)</td><td>66 ಕೆ.ವಿ ಮಾರ್ಗ ಹಾದು ಹೋಗುವ ಜಮೀನಿನ ಮಾಲೀಕರಿಗೆ ನೀಡುವ ಪರಿಹಾರದ ವಿವರ ಈ ಕೆಳಕಂಡಂತೆ ಇರುತ್ತವೆ.<br><br>ಭೂ-ಪರಿಹಾರ: ಗೋಪುರ ಅಳವಡಿಸುವ ಜಾಗಕ್ಕೆ ಹಾಗೂ ಮಾರ್ಗವು ಹಾದು ಹೋಗುವ ಕಾರಿಡಾರ್‌ನಲ್ಲಿ ಬರುವ ಜಮೀನುಗಳಿಗೆ ಜಿಲ್ಲಾಧಿಕಾರಿಗಳು ನಿಗದಿ ಪಡಿಸುವ ಭೂ-ಪರಿಹಾರವನ್ನು ಸಂಬಂದಪಟ್ಟ ರೈತರು/ ಭೂ ಮಾಲೀಕರಿಗೆ ನೀಡಲಾಗುವುದು.<br><br>ಬೆಳೆ ಪರಿಹಾರ: 66 ಕೆ.ವಿ ಮಾರ್ಗ ಹಾದು ಹೋಗುವ ಮಾರ್ಗದಡಿಯಲ್ಲಿ ಬರುವ ಆಯಾಯ ಬೆಳೆ / ಮರ ನಷ್ಟಗಳಿಗೆ ಸಂಬಂಧಿಸಿದಂತೆ ಬೆಳೆ ನಷ್ಟ ಪರಿಹಾರವನ್ನು ಸಂಬಂಧಪಟ್ಟ ಅರಣ್ಯ, ಕೃಷಿ, ತೋಟಗಾರಿಕೆ ಇಲಾಖೆ ಹಾಗೂ ಕಾಫಿ ಮಂಡಳಿಯಿಂದ ಮೌಲ್ಯ ಮಾಪನ ಮಾಡಿದ ವರದಿಯಂತೆ ನಷ್ಟ ಪರಿಹಾರವನ್ನು ನೀಡಲಾಗುವುದು.<br><br>ಪ್ರಸ್ತುತ ಕೊಡಗು ಜಿಲ್ಲೆಯಲ್ಲಿ 66 ಕೆ.ವಿ ಮಡಿಕೇರಿ-ವಿರಾಜಪೇಟೆ ಮಾರ್ಗದ ಕಾಮಗಾರಿ ಪ್ರಗತಿಯಲ್ಲಿದ್ದು, ಗದ್ದೆ ಮತ್ತು ತೋಟದ ಮೂಲಕ ಹಾದು ಹೋಗುತ್ತಿರುತ್ತದೆ. ಈ ಸಂಬಂಧ ಭೂ-ಪರಿಹಾರವನ್ನು ನಿಗದಿಪಡಿಸಲು ಜಿಲ್ಲಾಧಿಕಾರಿಗಳಿಗೆ ಕೋರಿಕೆಯನ್ನು ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಿಂದ ಸಲ್ಲಿಸಲಾಗಿರುತ್ತದೆ.</td></tr>
</table>

| | | |
|---|---|---|
| | | ಸದರಿ ಮಾರ್ಗಕ್ಕೆ ಬೆಳೆ ನಷ್ಟ ಪರಿಹಾರವನ್ನು ಸಂಬಂಧಪಟ್ಟ ಅರಣ್ಯ , ಕೃಷಿ, ತೋಟಗಾರಿಕೆ ಇಲಾಖೆ ಹಾಗೂ ಕಾಫಿ ಮಂಡಳಿಯಿಂದ ಕಾಮಗಾರಿ ನಿರ್ವಹಿಸುವ ಸಂದರ್ಭದಲ್ಲಿ ಸ್ಥಳ ಪರಿಶೀಲನೆ ಮಾಡಿಸಿ, ಸಂಬಂಧಪಟ್ಟ ಇಲಾಖೆಯವರು ನೀಡುವ ಮೌಲ್ಯ ಮಾಪನ ವರದಿ ಆಧಾರದ ಮೇಲೆ ಪರಿಹಾರವನ್ನು ವಿತರಿಸಲಾಗುವುದು. |
| ಇ) | ಸದರಿ ಕಾಮಗಾರಿಯು ಪ್ರಸ್ತುತ ಯಾವ ಹಂತದಲ್ಲಿದೆ ? | ಪ್ರಸ್ತುತ ಕೊಡಗು ಜಿಲ್ಲೆಯಲ್ಲಿ 66 ಕೆ.ವಿ ವಿರಾಜಪೇಟೆ-ಮಡಿಕೇರಿ 37.38 ಕಿ.ಮೀ ಡಬಲ್ ಸರ್ಕ್ಯೂಟ್ ಗೋಪುರದಲ್ಲಿ ಸಿಂಗಲ್ ಸರ್ಕ್ಯೂಟ್ ವಿದ್ಯುತ್ ಮಾರ್ಗದ ನಿರ್ಮಾಣ ಮತ್ತು 66/11 ಕೆ.ವಿ ಮಡಿಕೇರಿ ಹಾಗೂ 66/33/11 ಕೆ.ವಿ ವಿರಾಜಪೇಟೆ ವಿದ್ಯುತ್ ಉಪಕೇಂದ್ರದಲ್ಲಿ ಟರ್ಮಿನಲ್ ಬೇ ನಿರ್ಮಾಣ ಮಾಡುವ ಕಾಮಗಾರಿಯು ಪ್ರಗತಿಯಲ್ಲಿರುತ್ತದೆ. |

ಸಂಖ್ಯೆ: ಎನರ್ಜಿ 259 ಇಬಿಎಸ್ 2021

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು